



ಆಂಗ್ ಸಾನ್ ಸೂಕಿ

ಆಫ್ರಿಕಾಕ್ಕೆ ಬಂದಾಗ, ಬಿಳಿಯರ ಕೋರ್ಟು ಹಾಗೂ ಬಿಳಿಯರ ಕಾನೂನುಗಳು ಅವರನ್ನು ಜೈಲಿಗೆ ತಳ್ಳಿದವು. ಇತ್ತ ದಕ್ಷಿಣ ಆಫ್ರಿಕಾದ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಪಡೆಗಳು ಮೂರು ದಶಕಗಳ ಕಾಲ ಸಶಸ್ತ್ರ ಬಂಡಾಯದ ಮೂಲಕ ಹೋರಾಟ ನಡೆಸುತ್ತಿದ್ದವು. ಇದೇ ಆಫ್ರಿಕಾದಲ್ಲಿ ಗಾಂಧೀ ಮಾದರಿಯ ಅಸಹಕಾರ ಚಳವಳಿಯೂ ನಡೆಯುತ್ತಿತ್ತು. ಜಗತ್ತಿನಾದ್ಯಂತ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ನಾಗರಿಕ ಪ್ರತಿಭಟನೆಗಳು, ಹಲವು ದೇಶಗಳು ವರ್ಣಭೇದ ನೀತಿಯ ದಕ್ಷಿಣ ಆಫ್ರಿಕಾಕ್ಕೆ ಹಾಕಿದ್ದ ಬಹಿಷ್ಕಾರ– ಇವೆಲ್ಲವೂ ದಕ್ಷಿಣ ಆಫ್ರಿಕಾದ ಬಿಳಿಯರ ಸರ್ಕಾರ ಕೊನೆಗೂ ಮಣಿಯಲು ಕಾರಣವಾದವು. ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗುವ ಸೂಚನೆಗಳು ಕಾಣತೊಡಗಿದವು.

ಇಪ್ಪತ್ತೇಳು ವರ್ಷಗಳ ಜೈಲುವಾಸದಿಂದ ಹೊರ ಬಂದ ಮಂಡೇಲ ಸ್ವತಂತ್ರ ದಕ್ಷಿಣ ಆಫ್ರಿಕಾವನ್ನು ಕಟ್ಟಲು ಅಣಿಯಾದಾಗ ಹೇಳಿದ ಮಾತು: 'ಗಾಂಧೀಜಿ ಒಬ್ಬ ದಕ್ಷಿಣ ಆಫ್ರಿಕನ್. ಅವರ ನೆನಪು ಈ ಘಟ್ಟದಲ್ಲಿ ಮತ್ತು ವರ್ಣಭೇದ ನೀತಿಯನ್ನು ಸಂಪೂರ್ಣವಾಗಿ ನಿಷೇಧಿಸಲಿರುವ ಹೊಸ ಆಫ್ರಿಕಾದಲ್ಲಿ ಸದಾ ಇರಬೇಕು. ಇಪ್ಪತ್ತೊಂದನೆಯ ಶತಮಾನದಲ್ಲಿ ಮಾನವನ ಉಳಿವಿಗೆ ಗಾಂಧೀ ತತ್ತ್ವವೇ ಸರಿಯಾದ ಹಾದಿ ತೋರಬಹುದು ಎನ್ನಿಸುತ್ತದೆ.' ಮಂಡೇಲ ಸ್ವತಂತ್ರ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದ ಮೇಲೂ ಗಾಂಧೀವಾದವೇ ಅವರಿಗೆ ಹಾದಿ ತೋರಿಸಿತ್ತು. ಅದುವರೆಗೂ ಆಫ್ರಿಕನ್ನರನ್ನು ದಮನ ಮಾಡಿದ ಬಿಳಿಯರ ಆಳ್ವಿಕೆ ಕೊನೆಯಾದರೂ ಸಾವಿರಾರು ಬಿಳಿಯರು ಇನ್ನೂ ಆಫ್ರಿಕದಲ್ಲೇ ನೆಲೆಸಿದ್ದರು. ಅವರನ್ನು ಕ್ಷಮಿಸುವ, ಅನುಕಂಪದಿಂದ ನೋಡುವ, ಸಹಬಾಳ್ವೆ ನಡೆಸುವ ಉದಾರ ದೃಷ್ಟಿಕೋನ ಹಾಗೂ ಮೌಲ್ಯಗಳನ್ನು ಮಂಡೇಲ ಮತ್ತವರ ಸರ್ಕಾರ ಅಳವಡಿಸಿಕೊಂಡಿದ್ದರ ಹಿಂದೆ ಆಫ್ರಿಕಾದ ಬುಡಕಟ್ಟು ಸಮುದಾಯಗಳ ಸಹಬಾಳ್ವೆಯ ವಿಶಾಲ ಲೋಕದೃಷ್ಟಿಯ ಜೊತೆಗೆ ಗಾಂಧೀ ಪ್ರಭಾವವೂ ಇದೆ.

1999ರಲ್ಲಿ 'ಗಾಂಧಿ–ಮಾರ್ಟಿನ್ ಲೂಥರ್ ಕಿಂಗ್' ಪ್ರಶಸ್ತಿಯನ್ನು ಪಡೆಯಲು ಇಂಡಿಯಾಕ್ಕೆ ಬಂದಿದ್ದ ಮಂಡೇಲ, 1908ರಲ್ಲಿ ಮೊದಲ ಬಾರಿಗೆ ಗಾಂಧೀಜಿ ಸ್ವತಂತ್ರ ದಕ್ಷಿಣ ಆಫ್ರಿಕಾದ ಕನಸನ್ನು ಬಿತ್ತಿದ್ದನ್ನು, ಅದು ಇಪ್ಪತ್ತನೆಯ ಶತಮಾನವಿಡೀ ದಕ್ಷಿಣ ಆಫ್ರಿಕಾದಲ್ಲಿ ಪ್ರತಿಧ್ವನಿಸಿದ್ದನ್ನೂ ನೆನೆದಿದ್ದರು. ಆದರೂ, ತನ್ನ ಮಟ್ಟಿಗೆ 'ಅಹಿಂಸಾತ್ಮಕ ಚಳವಳಿ ಗಾಂಧೀಜಿಗಿದ್ದಂತೆ ಒಂದು ನೈತಿಕ ತತ್ತ್ವವಾಗಿರಲಿಲ್ಲ; ಬದಲಿಗೆ ಅದೊಂದು ಹೋರಾಟದ ವಿಧಾನ ಮಾತ್ರವಾಗಿತ್ತು' ಎಂದು ಕೂಡ ಮಂಡೇಲ ಪ್ರಾಮಾಣಿಕವಾಗಿ ಒಪ್ಪಿಕೊಂಡರು.

ಇತ್ತ ಏಷ್ಯಾದಲ್ಲಿ, ಇವತ್ತಿಗೂ ಟಿಬೆಟ್ಟನ್ನು ಬೌದ್ಧ ಟಿಬೆಟ್ಟನ್ನಾಗಿ ಉಳಿಸಿಕೊಳ್ಳುವ ಆಸೆಯಿಂದ ಹಾಗೂ ಟಿಬೆಟ್ಟಿನ ಸ್ವಾಯತ್ತತೆಗಾಗಿ ಚೀನಾದ ವಿರುದ್ಧ ಹೋರಾಡುತ್ತಿರುವ ದಲೈಲಾಮ ಬೌದ್ಧ ತತ್ತ್ವ ಮತ್ತು ಗಾಂಧೀವಾದಗಳನ್ನು ಬೆಸೆದು ಕ್ರಿಯಾಶೀಲರಾಗಿರುವುದು ನಮ್ಮ ಕಣ್ಣ ಮುಂದೆಯೇ